ಉ) ನೇಕಾರ ಸಹಕಾರ ಸಂಘಗಳ ಮುಖಾಂತರ ಎಲ್ಲಾ ನೇಕಾರರ ಸದಸ್ಯರಿಗೆ ಸಾಲ ಭದ್ರತೆಗೆ ಅನುಗುಣವಾಗಿ ಹಾಗೂ ಬ್ಯಾಂಕಿನ ಸಾಲ ನಿಯಮಾವಳಿಗೊಳಪಟ್ಟು ಹಾಗೂ ಲಭ್ಯವಿರುವ ಸಂಪನ್ಮೂಲದ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗುತ್ತಿದ್ದು, ಬ್ಯಾಂಕಿನಿಂದ ನೇಕಾರರಿಗೆ ಸಾಲ ವಿತರಣೆ ಮಾಡಲು ಯೋಜನೆಯನ್ನು ರೂಪಿಸಿ ಕೊಳ್ಳಲಾಗಿರುತ್ತದೆ

240(568) ಶ್ರೀ ಸಿದ್ದು ಸವದಿ (ಜಮಖಂಡಿ)

ಮಾನ್ಯ ಕೃಷಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ಜಮಖಂಡಿ ತಾಲ್ಲೂಕಿನಲ್ಲಿ ರಿಯಾಯ್ತಿ ಬೀಜಗಳ ಕೊರತೆ ಇದ್ದದು ಸರ್ಕಾರಕ್ಕೆ ತಿಳಿದಿದೆಯೇ? ಹಾಗಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

2) 2006–07 ರಲ್ಲಿ ಜಮಖಂಡಿ ತಾಲ್ಲೂಕಿಗೆ ಕೊಡಮಾಡಿದ ರಿಯಾಯಿತಿ ಹಣವೆಷ್ಟು ಮತ್ತು ಇಲ್ಲಿಯವರೆಗೆ 2007–08 ರಲ್ಲಿ ಕೊಡಲಾದ ಹಣವೆಷ್ಟು?

3) ಈ ವರ್ಷ ಚೆನ್ನಾಗಿ ಮಳೆ ಆಗಿದ್ದರಿಂದ ಬೀಜದ ಬೇಡಿಕೆ ಹೆಚ್ಚಿದ್ದು ಇದನ್ನು ಪೂರೈಸಲಾಗುವುದೇ?

4) ಯಾವ ಯಾವ ಬೀಜಗಳು ರಿಯಾಯಿತಿ ದರದಲ್ಲಿ ಕೊಡಲಾಗುವುದು (ಸಂಪೂರ್ಣ ವಿವರ ನೀಡುವುದು)

**ಶ್ರೀ ಬಂಡೆಪ್ಪಕಾಶಂಪೂರ**

1) ಕೊರತೆ ಕಂಡು ಬಂದಿಲ್ಲವಾದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

| 2) | ವರ್ಷ | ಕೊಡಮಾಡಿದ ಹಣ |
|---|---|---|
| | 2006–07 | 61 206 ಲಕ್ಷ |
| | 2007–08 | 92 218 ಲಕ್ಷ |

3) ಹೌದು

4) ತಾಲ್ಲೂಕಿನಲ್ಲಿ 2007 ರ ಮುಂಗಾರು ಹಂಗಾಮಿನಲ್ಲಿ ಹೈ–ಜೋಳ, ಸಜ್ಜೆ, ಗೋವಿನ ಜೋಳ, ಹೆಸರು ತೊಗರಿ, ಸೂರ್ಯಕಾಂತಿ, ಸೋಯಾ, ಅವರೆ ಹಾಗೂ ಔಡಲ ಬೀಜಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿತರಿಸಲಾಗುತ್ತಿದೆ

241(569) ಶ್ರೀ ಸಿದ್ದು ಸವದಿ (ಜಮಖಂಡಿ)

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೀನುಗಾರರಿಗೆ ಮತ್ತು ಮೀನುಗಾರರ ಸಂಘಗಲಿಗೆ ನದಿಯಲ್ಲಿ ಮೀನು ಹಿಡಿಯಲು ಗುತ್ತಿಗೆ ನೀಡಲು ಇರುವ ನಿಯಮಾವಳಿಗಳಾವುವು?

ಆ) ಜಮಖಂಡಿ ತಾಲ್ಲೂಕಿನಲ್ಲಿ ಇರುವ ಅಂತಹ ಸಂಘಗಳೆಷ್ಟು ಮತ್ತು ಅವುಗಳಲ್ಲಿರುವ ಮೀನುಗರರ ಸಂಖ್ಯೆ ಎಷ್ಟು?

ಇ) ಜಮಖಂಡಿ ತಾಲ್ಲೂಕಿನಲ್ಲಿರುವ ಕೃಷ್ಣಾನದಿಯಲ್ಲಿ ಗುತ್ತಿಗೆಯನ್ನು ಮೀನುಗಾರರಲ್ಲದ ವ್ಯಕ್ತಿಗೆ ಗುತ್ತಿಗೆ ಕೊಡಲಾಗಿದೆಯೇ?

ಈ) ಈ ಗುತ್ತಿಗೆದಾರರನ್ನು ಬಡ ಮೀನುಗಾರರ ಮೀನುಗಲನ್ನು ಅತೀ ಕಡಿಮೆ ಬೆಲೆಯಲ್ಲಿ ಖರೀದಿಸಿ ನಾಲ್ಕು ಪಟ್ಟು ಹೆಚ್ಚು ಬೆಲೆಯಿಂದ ವ್ಯಾಪಾರ ವ್ಯವಹಾರ ಮಾಡುತ್ತಿದ್ದು ಇದರಿಂದ ಬಡ ಮೀನುಗಾರರಿಗೆ ಅನ್ಯಾಯವಾಗುತ್ತಿಲ್ಲವೆ?